ಈ ದಿನ ದಿನಾಂಕಃ 16-06-2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ ವೈ ಎಂ ಅರ್ ರವರಿಂದಃ**

ಪಿ ಸಿ ಜಯಪ್ಪ ಬಿನ್ ಚೆನ್ನಬಸಪ್ಪರವರು ನನಗೆ ತಂದೆಯಾಗಬೇಕು. ಕಮಲಮ್ಮ ಕೊಂ ನಂಜುಂಡಪ್ಪನವರು ನನಗೆ ಚಿಕ್ಕಮ್ಮನಾಗಬೇಕು. ಪಿ ಸಿ ಜಯಪ್ಪ ಮತ್ತು ಕಮಲಮ್ಮರವರ ಸಹಿಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿ ಮುಂದುವರೆದು ನಾನು ನನ್ನ ತಂದೆಯ ಸಹಿಯನ್ನು ಮಾತ್ರ ಗುರುತಿಸುತ್ತೇನೆ ಕಮಲಮ್ಮನವರ ಸಹಿಯನ್ನು ಆಕೆಯ ಮಗ ಗುರುತಿಸುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಸದರಿ ಸಹಿಯು ನನ್ನ ತಂದೆಯ ಸಹಿ ಎಂದು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ-11 ಸಾಕ್ಷಿಯ ತಂದೆಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ನಿಪಿ-11 ಅರ್ಜಿಯನ್ನು ದಿಃ 21-08-2018 ರಂದು ಸಂತೆಬೆನ್ನೂರು ಪಿ ಡಿ ಓ ರವರಿಗೆ ನನ್ನ ತಂದೆ ನೀಡಿರುತ್ತಾರೆ ಎಂದರೆ ಸರಿ. ನಿಪಿ-11ರ ಅರ್ಜಿಯನ್ನು ನನ್ನ ತಂದೆ ಮತ್ತು ಚಿಕ್ಕಮ್ಮ ಸರ್ವೆ ನಂ 239/4 ರಲ್ಲಿನ ಗ್ರಾಮ ಠಾಣಾ ಆಸ್ತಿಯನ್ನು ಈ ಸ್ವತ್ತು ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ-11ರ ಅರ್ಜಿಯು ದಾವಾಸ್ತಿಗೆ ಸಂಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂಧಿಸಿದಂತೆ ನಿಪಿ-11 ನ್ನು ಹೊರತುಪಡಿಸಿ ನಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನಿಪಿ-11ರಂತೆ ಅರ್ಜಿ ನೀಡಿರುವ ಸರ್ವೆ ನಂ 239/4ರ 18 ಗುಂಟೆ ಜಮೀನು ಚೆನ್ನಬಸಪ್ಪ ಬಿನ್ ಪಾಡಿಗೇರೆರವರಿಗೆ ಸೇರಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಪಹಣಿ ಪತ್ರಿಕೆಯನ್ನು ತೋರಿಸಿದ್ದು ಸದರಿ ಪಹಣಿ ಪ್ರತಿಯಂತೆ ಸರ್ವೆ ನಂ 239/4ರ ಜಮೀನು ಚೆನ್ನಬಸಪ್ಪ ಬಿನ್ ಪಾಡಿಗೇರೆರವರಿಗೆ ಸೇರುತ್ತದೆ ಎಂದರೆ ಪಹಣಿ ಪ್ರತಿಯಂತೆ ಇರುತ್ತದೆ. ಸದರಿ ಪಹಣಿ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿ ಒಪ್ಪಿದ ಮೇರೆಗೆ ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯಲ್ಲಿ ನನ್ನ ತಂದೆ ಸರ್ವೆಯವರಿಗೆ ಅರ್ಜಿ ನೀಡಿದ ದಾಖಲೆ ಎಂದರೆ ಸರಿ. ಸಾಕ್ಷಿಯು ಸದರಿ ನೋಟಿಸಿನ ಪ್ರತಿಯನ್ನು ಹಾಗೂ ಅದರಲ್ಲಿರುವ ತನ್ನ ತಂದೆಯ ಸಹಿಯನ್ನು ನೋಡಿ ಗುರುತಿಸಿ ಒಪ್ಪಿದ ಮೇರೆಗೆ ನೋಟಿಸಿನ

ಪ್ರತಿಯನ್ನು ನಿಪಿ-13 ಎಂದು, ಸಾಕ್ಷಿಯ ತಂದೆಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ತಿಳುವಳಿಕೆ ಪತ್ರವನ್ನು ತೋರಿಸಿದ್ದು ಸದರಿ ಪತ್ರವನ್ನು ನನ್ನ ತಂದೆ ಹಾಗೂ ಚಿಕ್ಕಮ್ಮ ಕಮಲಮ್ಮನವರಿಗೆ ಸಂತೆಬೆನ್ನೂರು ಗ್ರಾಮ ಪಂಚಾಯತಿಯವರು ನೀಡಿದ ದಾಖಲೆ ಎಂದರೆ ಸರಿ. ಸಾಕ್ಷಿಯು ಸದರಿ ತಿಳುವಳಿಕೆ ಪತ್ರವನ್ನು ಗುರುತಿಸಿ ಒಪ್ಪಿದ ಮೇರೆಗೆ ನೋಟಿಸಿನ ಪ್ರತಿಯನ್ನು ನಿಪಿ-14 ಎಂದು ಗುರುತಿಸಲಾಯಿತು. ನನ್ನ ತಂದೆ ಸಲ್ಲಿಸಿರುವ ನಿಪಿ-11 ಮತ್ತು 13 ರ ಕೋರಿಕೆ ಮೇರೆಗೆ ನಿಡಿ-16 ರ ಇ-ಸ್ವತ್ತನ್ನು ಗ್ರಾಮಪಂಚಾಯತಿಯವರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂ 239/4ರ 18 ಗುಂಟೆ ಜಮೀನಿನ ಪೈಕಿ ಚೆನ್ನಬಸಪ್ಪ ಬಿನ್ ಪಾಡಿಗೇರೆರವರು ನಿಡಿ-16ರ ಸ್ವತ್ತಿನ ಅಳತೆಗೆ ಸಂಬಂಧಿಸಿದಂತೆ ಯಾವುದಾದರೂ ಕ್ರಯ ಅಥವಾ ಆಧಾರ ಮಾಡಿಕೊಟ್ಟ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಚೆನ್ನಬಸಪ್ಪ ಬಿನ್ ಪಾಡಿಗೇರೆರವರು ನನಗೆ ತಾತನಾಗಬೇಕು, ಸದರಿಯವರು ನನ್ನ ತಂದೆಯ ತಂದೆ.

ನಿಡಿ-18 ರಿಂದ 26ರವರೆಗಿನ ಸ್ವತ್ತುಗಳು ಚೆನ್ನಬಸಪ್ಪ ಬಿನ್ ಪಾಡಿಗೇರೆರವರಿಗೆ ಯಾವ ರೀತಿ ಬಂದಿರುತ್ತದೆ ಎಂಬುದಕ್ಕೆ ದಾಖಲೆಗಳು ಇರುವುದಿಲ್ಲ. ನಿಡಿ-25 ರಲ್ಲಿ ಸ್ವತ್ತಿನ ಸಂಖ್ಯೆ 404/ಸಿ ರ ಸ್ವತ್ತು ಚೆನ್ನಬಸಪ್ಪರವರ ಹೆಸರಿಗೆ ಯಾವ ರೀತಿ ಖಾತೆ ದಾಖಲಾಯಿತು ಎಂಬುದಕ್ಕೆ ಯಾವುದೇ ದಾಖಲೆಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ವಾದಿಯು ನಮ್ಮ ವಿರುದ್ದ ಗ್ರಾಮ ಪಂಚಾಯತಿ ಖಾತಾ ಸಂಖ್ಯೆ 301, 818/404/ಸಿ ಯ ಆಸ್ತಿಯ ಸಂಬಂಧ ನಮ್ಮ ವಿರುದ್ದ ಈ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ದಾವಾಸ್ತಿಗೆ ಸಂಬಂಧಿಸಿದಂತೆ ಪಂಚಾಯತಿಯವರು ಇ-ಸ್ವತ್ತನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಪ್ರತಿಯು ದಾವೆ ದಾಖಲಾದಾಗ ನಮಗೆ ಬಂದಿರುತ್ತದೆ. ದಾವೆಯಲ್ಲಿರುವ ವಿಚಾರವನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ವಾದಿಯು ದಾವಾಸ್ತಿಯನ್ನು ಬಿಟ್ಟುಕೊಡುವಂತೆ ಕೋರಿ ನಮ್ಮಗಳ ವಿರುದ್ದ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಾತನಾದ ಗೌಡ್ರ ಹನುಮಂತಪ್ಪ ಬಿನ್ ಗೌಡ್ರ ತಿಮ್ಮಯ್ಯನವರಿಗೆ ದಿಃ 30-10-1964 ರಂದು ಕ್ರಯಪತ್ರ ಸಂಖ್ಯೆ 1897/1963-64 ರಂತೆ ಬಂದ ಆಸ್ತಿ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿರುವ ದಾವಾಸ್ತಿಯ ಚೆಕ್ಕುಬಂದಿ ಮತ್ತು ದಾವೆಯಲ್ಲಿರುವ ಚೆಕ್ಕುಬಂದಿ ಮತ್ತು ಅಳತೆಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಕ್ರಯಪತ್ರದಲ್ಲಿರುವ ಚೆಕ್ಕುಬಂದಿಯ ಒಳಗಡೆ

30 ಇಂಟು 45 ಅಡಿ ಮನೆ ಇರುತ್ತದೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿರುವ ಆಸ್ತಿಯ ಮನೆಯ ಪೂರ್ವಕ್ಕೆ ಅದೇ ಆಸ್ತಿಯಲ್ಲಿ ವಾದಿಗೆ ಸೇರಿದ ಖಾಲಿ ಜಾಗ ಉಳಿದಿರುತ್ತದೆ ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ರಸ್ತೆ ಎಂದರೆ ಸರಿ, ಉತ್ತರಕ್ಕೆ ಹೆಂಚಿನ ಮನೆ ನಾಗಪ್ಪನವರ ಆಸ್ತಿ ಎಂದರೆ ಸರಿಯಲ್ಲ ಮತ್ತು ದಕ್ಷಿಣಕ್ಕೆ ಇದೇ ವಾದಿಗೆ ಸೇರಿದ ಉಳಿಕೆ ಆಸ್ತಿ ಎಂದರೆ ಸರಿಯಲ್ಲ. ಈ ಚೆಕ್ಕುಬಂದಿ ನಡುವೆ ಇರುವ ಆಸ್ತಿಯು ನಮಗೆ ಸೇರಿರುತ್ತದೆ ಎಂದು ತೋರಿಸಲು ಯಾವುದೇ ನೊಂದಾಯಿತ ದಾಖಲೆಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜುರುಪಡಿಸಿರುವ ನಿಡಿ-1 ರಿಂದ 14 ರವರೆಗಿನ ದಾಖಲೆಗಳಲ್ಲಿ ಕ್ರಮ ಸಂಖ್ಯೆ 404/ಸಿ ಎಂದು ಎಲ್ಲಿಯೂ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ-25ರ ದಾಖಲೆಯನ್ನು ನಾವು ಈ ಪ್ರಕರಣ ದಾಖಲಾದ ನಂತರ ಪಿ ಡಿ ಓ ಮತ್ತು ಸರ್ವೆಯರ್ ಜೊತೆ ಸರೀಕಾಗಿ ಬೇರೆ ಆಸ್ತಿಗೆ ಸಂಬಂಧಿಸಿದ ಆಸ್ತಿಯಲ್ಲಿ ವಾದಿಗೆ ಸೇರಿದ 404/ಸಿ ಯ ಆಸ್ತಿಯನ್ನು ಸೇರಿಸಿ ಅದನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಪಂಚಾಯತಿಯವರು ನೀಡಿರುವ ಇ-ಸ್ವತ್ತಿನ ವಿಚಾರವಾಗಿ ನಾನು ಇಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ವಾದಿಗೆ ಸೇರಿದ ದಾವಾಸ್ವತ್ತಿನ ಆಸ್ತಿಯನ್ನು ವಾದಿಯು ತಾನು ಕೇಳಿದಾಗ ಬಿಟ್ಟುಕೊಡುವಂತೆ ಅನುಮತಿ ಮೇರೆಗೆ ನಮಗೆ ಬಿಟ್ಟುಕೊಟ್ಟಿದ್ದು ಸದರಿ ದಾವಾಸ್ತಿಯನ್ನು ಈಗ ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಪ್ರ.ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೆ ಇದ್ದರು ದಾವಾಸ್ತಿಯನ್ನು ಪಡೆಯುವ ಸಲುವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.